ಪೂರಾ ಸುಖ ಸಿಕ್ಕಿದ್ದರೆ ಅವನ್ಯಾಕೆ ಹೊರಗೆ ಹುಡುಕಿಕೊಂಡು ಹೋಗುತ್ತಿದ್ದ? ನಿನ್ನ ತೌರು ಮನೆ ಸಂಪರ್ಕ ನೀನು ಕಡಿದುಕೊಳ್ಳಲಿಲ್ಲ... ಓಡಿ ಹೋದ ನಿನಗೆ ಅವರು ಆಶ್ರಯ ಕೊಡಲಿಲ್ಲ.. ಅಷ್ಟೇ.. ಆ ಕೋಪಕ್ಕೆ ನೀನು ನಿನ್ನ ತೌರಿಗೆ ಹೋಗಲ್ಲ.. ಅವನ್ನ ಯಾಕೆ ಅನ್ನಿಯಾ?

ಹೆಜ್ಜೆ ಬಿರುಸು ಮಾಡಿ ಮುಂದೆ ನಡೆದರು ಅತ್ತೆ. ನಾನು ನಿಂತಲೇ ನಿಂತೆ. ಸಹಿಸಿಕೊಳ್ಳುವುದು ಒಂದು ಉತ್ತಮ ಗುಣ ಅಲ್ಲವೇ ಅಲ್ಲ.. ಮನೆ ಮುರಿಯಬಾರದು, ಮಕ್ಕಳು ಅಪ್ಪನೋ, ಅಮ್ಮನೋ ಅಂತ ಆರಿಸಿಕೊಳ್ಳು ವಂತಾಗಬಾರದು.. ಹಳ್ಳಿಮನೆಯ ಮರ್ಯಾದೆ ಬೀದಿ ಪಾಲಾಗಬಾರದು ಎಂದು ಸಹಿಸಿಕೊಂಡಿದ್ದೇ ತಪ್ಪಾಯಿತು. ಹೋಗಲು ತಾವಿರಲ್ಲಿಲ್ಲ. ಹೋಗಲಿಲ್ಲ. ಈ ಮನೆ ಕೊಡುವ ರಕ್ಷಣೆ, ಹಳ್ಳಿಮನೆ ಸೊಸೆ ಎಂದು ಸಿಗುವ ಮರ್ಯಾದೆ ಇರುತ್ತಿರಲ್ಲಿಲ್ಲ.. ಅದಕ್ಕೆ ಹೋಗಲಿಲ್ಲ ಈಗ ಸಹಿಸಿಕೊಂಡೆ ಸಾವರಿಸಿಕೊಂಡೆ ಎಂದರೆ ಹೇಗೆ ಎಂಬ ಅತ್ತೆಯ ವಾದ ಒಂದು ಮಟ್ಟದಲ್ಲಿ ನಿಜವೇ... ಹೆಂಡತಿ ಮನೆಯಲ್ಲಿ ಇದ್ದೂ ಬೇರೆ ಹೆಂಗಸರ ಹಿಂದೆ ಹೋಗುವ ಗಂಡಸು.. ತಪ್ಪು ಮಾಡುತ್ತಿದ್ದಾನೆ ಎಂದು ಯಾರೂ ಹೇಳುವುದಿಲ್ಲ.. ಅವಳೇ ಸರಿಇಲ್ಲ ಅದಕ್ಕೆ ಹೋದ ಎಂದು ಅವನನ್ನು ಬೆಂಬಲಿಸಿಯೇ ಮಾತಾಡುತ್ತದೆ ಸಮಾಜ! ಹೋಗುವುದೆಲ್ಲಿ? ಇರುವುದೆಲ್ಲಿ?

ಈಗ ರಾಜಕೀಯ.. ತಿರುಗಿ ಹೊಸ ಜನ, ಹೊಸ ಶೋಕಿಗಳು...

ಅಮ್ಮ ಯಾರೋ ಬಂದಿದ್ದಾರೆ...

ಆಂ ... ಬೆಚ್ಚಿ ತಿರುಗಿದೆ. ನಿಂಗಿ ನಿಂತಿದ್ದಳು.

ಯಾರೋ ಬಂದಿದ್ದಾರೆ.. ದೊಡ್ಡ ಸೂಟ್ಕೇಸ್ ತಂದಿದ್ದಾರೆ... ನಿಂಗಿ ಹೇಳಿದಳು.

ಬಂದೆ ನಡಿ... ಮುಂದಿನ ಹಾಲಿನಲ್ಲಿ ಕೂಡಿಸು. ಕುಡಿಯಲು ನೀರು ತೊಗೊಂಡು ಹೋಗಿ ಕೊಡು... ಗಂಟು ಹಾಕಿಕೊಂಡಿದ್ದ ಕೂದಲನ್ನು ಬಿಚ್ಚಿ ಅದರಲ್ಲಿ ಬೆರಳಾಡಿಸಿ ಸರಿ ಮಾಡಿಕೊಂಡು, ಸೆರಗನ್ನು ಸರಿಪಡಿಸಿಕೊಂಡು ಮುಂದಿನ ಹಾಲಿನತ್ತ ಹೆಜ್ಜೆ ಹಾಕಿದೆ.

ನೀಲಿ ಜೀನ್ಸ್ ಪ್ಯಾಂಟು, ಬಿಳಿ ಟೀ ಶರ್ಟ್ ಧರಿಸಿ ಹಾಲಿನ ಬಾಗಿಲ ಬಳಿಯೇ ನಿಂತಿದ್ದ ಯುವಕನ ನೋಡಿ ಅರೆಕ್ಷಣ ನಿಂತೆ.

ಯಾರೂ?... ಏನಾಗಬೇಕಿತ್ತು?...

ವಿಶ್ವಾಸ್ ದೇಶಪಾಂಡೆ, ಸ್ತ್ರಿ ಶಕ್ತಿಯ ಸಂಚಾಲಕಿ...?

ನಾನೇ...... ಏನಾಗಬೇಕಿತ್ತು?...

ಸ್ತ್ರೀಶಕ್ತಿಗೂ ಈ ಯುವಕನಿಗೂ ಏನು ಸಂಬಂಧ?...

ಪ್ರೀತಿ ವಸಿಷ್ಠ ಅವ್ರು ಕಳ್ಸಿದ್ರು... ಸಾಫ್ಟ್ ಡಾಲ್ ಮೇಕಿಂಗ್ ಹೇಳಿಕೊಡಲು...

ಹಾಂ... ಕರ್ಕೊಂಡು ಬಂದಿದ್ದೀರಾ?

ಯಾರನ್ನ? ಮೇಲೆ ಏರಿದ ಆತನ ಹುಬ್ಬನ್ನು ನೋಡಿ ನಾನು ಹುಬ್ಬು ಗಂಟ್ಹಾಕಿದೆ.


ಹೇಳಿಕೊಡೋರನ್ನ..! ಹೋದ ವಾರವೇ ಬರಬೇಕಿತ್ತು. ಹದಿನೈದು ಜನ ರಿಜಿಸ್ಟರ್ ಮಾಡಿಸಿಕೊಂಡಿದ್ದಾರೆ ಕಲಿಯಲು...

ಕಲಿಸೋದು ನಾನೇ!.. ಕಳೆದ ವಾರ ನಾನು ಬ್ಯುಸಿ ಇದ್ದೆ, ನಂಗೆ ಬೇರೆ ಕೆಲಸವಿತ್ತು. ಬೊಂಬೆ ಮಾಡುವುದು ಹೇಳಿಕೊಡಲು ನಂಗೆ ಬೇರೆ ಪೇಮೆಂಟ್ ಏನಿಲ್ಲ.. ನಂಗೆ ಇರಲು ವ್ಯವಸ್ಥೆ ಮಾಡಿದರೆ ಸಾಕು. ಮೂರು ವಾರದಲ್ಲಿ ಹೇಳಿಕೊಡ್ತೀನಿ. ಆರು ವಾರದಲ್ಲಿ ಪ್ರೊಫೆಷನಲ್ಲಾಗಿ ಬೊಂಬೆ ತಯಾರಿಸಬಹುದು.

## ಸೋಲು ಗೆಲುವು

ದಿನವೂ ಹೇಳುವಿರಿ
ಗೆಲುವಿನ ಸೂತ್ರಗಳನ್ನು
ನಿಮ್ಮ ಕಂದಮ್ಮಗಳಿಗೆ..
ಎಂದಾದರೂ
ಹೇಳಿರುವಿರೇನು
ಸೋಲನ್ನು ಎದುರಿಸುವ
ಬಗೆಯನ್ನು..?

★ ಡಾ.ವಿನಯ ಶ್ರೀನಿವಾಸ್




ಕೂತ್ಕೊಂಡು ಮಾತಾಡಬಹುದೇ?.

ಆಂ ... ಸಾರಿ ಬನ್ನಿ ಕೂತ್ಕೊಳ್ಳಿ..

ಸೋಫಾದ ಮೇಲೆ ಕೂತ ಆತನ ಮುಂದೆ ಕುರ್ಚಿಯೆಳೆದು ಕುಳಿತುಕೊಂಡೆ.

ಮೆಟೀರಿಯಲ್ಸ್ ನಾನೇ ಸಪ್ಲೈ ಮಾಡ್ತೀನಿ.. ಕಲಿತ ಮೇಲೆ ಚೆನ್ನಾಗಿ ಮಾಡಿದರೆ ಬೊಂಬೆಗಳ ಮಾರಾಟಕ್ಕೂ ಸಹಾಯ ಮಾಡುತ್ತೇನೆ. ಮಾಡುವವರಿಗೆ ಇಂಟರೆಸ್ಟ್ ಇರಬೇಕಷ್ಟೇ.. ಬಿಸಿಯಾಗಿ ಕಾಫಿನೋ, ಟೀ ನೋ ಸಿಗುತ್ತಾ ಮೇಡಂ?..

ಆಂ ... ಹುಂ.. ನಿಂಗೀ.. ನಿಂಗೀ.. ಅವಳಿಗೆ ಕೂಗು ಹಾಕಿದ ಮೇಲೆ ಹೊಳೆಯಿತು ಇವತ್ತು ರತ್ನಮ್ಮ ಬಂದಿಲ್ಲ.. ನಾನೇ ಕಾಫಿ ಮಾಡಿ ತರಬೇಕು...

ಬಂದೆ ಒಂದ್ನಿಮಿಷ ಕೂತ್ಕೊಳ್ಳಿ... ಮೇಲೆದ್ದೆ.

ಬೇಡ ಬಿಡಿ ತೊಂದ್ರೆ ತೊಗೊಬೇಡಿ... ಇಷ್ಟು ದೊಡ್ಡ ಬಂಗಲೆಯಲ್ಲವೇ ಅಂಗಡಿಯವರು, ಆಳುಗಳು ಎಲ್ಲಾ ಇರ್ತಾರೆ ಅಂತ ಕೇಳ್ದೆ..

ಇವತ್ತು ಅಡಿಗೆಯವರು ರಜ. ನಾನೇ ಮಾಡ್ಕೊಂಡು ಬರ್ತೀನಿ.. ಎರಡು ನಿಮಿಷ..

ಪ್ಲೀಸ್ ಬೇಡ... ನಿಮ್ಮ ಹಸ್ತ ನೋಡಿ... ನೀವೇನಾದರೂ ಕೆಲಸ ಮಾಡ್ತೀರಿ ಅಂತಲೇ ಅನ್ನಿಸೊಲ್ಲ.. ಇಷ್ಟು ದೊಡ್ಡ ಬಂಗಲೇಲಿ ಇರೋರು ಕಾಫಿ ತಿಂಡಿ ಮಾಡ್ತಾರಾ?..

ಹಾಗೇನಿಲ್ಲ.. ಬಂದೆ ಇರಿ... ನಿಧಾನವಾಗಿ ಒಳನಡೆದು ಕಾಫಿ ಬೆರೆಸಿ, ಬಿಸಿಯಾಗಲು ಒಲೆಯ ಮೇಲಿಟ್ಟು ನನ್ನ ಹಸ್ತಗಳನ್ನು ನೋಡಿಕೊಂಡೆ. ಹೌದೇ?.. ನನ್ನ ಹಸ್ತಗಳು ನಾಜೂಕಾಗಿ ಚೆನ್ನಾಗಿದೆಯೇ?.. ಕೆಲಸ ಮಾಡಿ ಸವೆದಿಲ್ಲವೇ?.....

ಯಾರದು?.. ಮಿಕ್ಸರ್ ಆರಿಸಿ ಅತ್ತೆ ಕೇಳಿದಾಗ ಅವರತ್ತ ತಿರುಗಿದೆ.

ಸ್ತ್ರೀಶಕ್ತಿಯಲ್ಲಿ ಬೊಂಬೆ ಮಾಡೋದನ್ನ ಹೇಳಿಕೊಡಕ್ಕೆ ಬೆಂಗಳೂರಿನಿಂದ ಬಂದಿದ್ದಾರೆ...

ಇದೆಲ್ಲಾ ಮನೇಲಿ ಇಟ್ಕೊಬೇಡ... ನೋಡೋಕ್ಕೆ ಎಷ್ಟು ಚಿಕ್ಕವನ ಹಾಗೆ ಇದ್ದಾನೆ.. ಈಗಿನ ಕಾಲದ ಹುಡುಗನ ತರಹ ಕಾಣಿಸ್ತಾನೆ.. ಅವನೇನು ಬೊಂಬೆ ಮಾಡೋದು ಹೇಳಿಕೊಡ್ತಾನೆ?...

ಕ್ಲಾಸು ಮನೆಯಲ್ಲಿ ಅಲ್ಲ.. ಶಾಲೆಯಲ್ಲಿ ಒಂದು ಕೋಣೆ ತಗೊಳ್ತೀವಿ... ಊರಿಗೆ ಬಂದ ತಕ್ಷಣ ನನ್ನ ನೋಡೋಕ್ಕೆ ಬಂದಿದ್ದಾರೆ ಅಷ್ಟೇ..

ಪುಟ್ಟ ಟ್ರೇನಲ್ಲಿ ಕಾಫಿ ಲೋಟ ಇಟ್ಟುಕೊಂಡು ಹೊರನಡೆದೆ. ಇವರು ಹತ್ತು ಹಲವಾರು ಹೆಂಗಸರೊಡನೆ ಸಂಬಂಧ ಇಟ್ಟುಕೊಂಡರೆ ಪರವಾಗಿಲ್ಲ... ಆದರೆ ನಾನು ಮನೆಯಲ್ಲಿ.. ನನಗಿಂಥ ಚಿಕ್ಕವನೊಬ್ಬನೊಡನೆ ಮಾತಾಡಿದರೆ ಇವರ ಮನೆಯ ಮರ್ಯಾದೆ ಹೋಗಿಬಿಡುತ್ತದೆ...

ಹಾಲಿನೊಳಗೆ ಹೋದಾಗ ವಿಶ್ವಾಸ್ ನನ್ನ ಸಂಸಾರದ ಭಾವಚಿತ್ರದ ಎದುರು ನಿಂತಿದ್ದ.. ನಾಲ್ಕಡಿ, ಮೂರಡಿಯ ಭಾವಚಿತ್ರ. ಕುರ್ಚಿಯಲ್ಲಿ ರಾಣಿಯಂತೆ ಕುಳಿತಿರುವ ನಾನು.. ಅಕ್ಕ ಪಕ್ಕ ರಾಹುಲ್, ರಾಧಿಕಾ ಹಿಂದೆ ಬಳಸಿ ನಿಂತಂತೆ ಇವರು ಈಗ ಆ ಭಾವಚಿತ್ರದ ಮುಂದೆ ಇವನು.. ಎತ್ತರದ ಆಳು ತಲೆ ತುಂಬಾ ಕೂದಲು..

ಕಾಫಿ...

ಓ ಥ್ಯಾಂಕ್ಸ್.. ನೀವು..? ನೀವು ಕುಡಿಯಲ್ವಾ?... ಹೀಗೆ ಒಬ್ಬರಿಗೇ ಕಾಫಿ ಕೊಡಬಾರದ್ರಿ.. ಒಳ್ಳೆ ಡ್ಯೂಟಿ ತರಹ ಇರುತ್ತೆ.. ಎರಡು ಸಿಪ್ ಆದರೂ ಜೊತೆಗೆ ಕುಡಿಯಬೇಕು.. ಇನ್ನೊಂದು ಲೋಟ ತರ್ತೀರಾ ಪ್ಲೀಸ್...

ಇಲ್ಲ.. ನಾನು ಕಾಫಿ ಕುಡಿಯಲ್ಲ.. ನೀವು ಕುಡೀರಿ... ಮೆಲ್ಲನೆ ಹೇಳಿದೆ.

ಓ.. ಅದಕ್ಕೆ ನೀವು ಇಷ್ಟು ಬೆಳ್ಳಗೆ ಇರೋದೇನೋ... ಬರೀ ಹಾಲು ಕುಡಿತೀರಾ?....

ಅವನ ಪ್ರಶ್ನೆಗೆ ಉತ್ತರಿಸದೆ ಸುಮ್ಮನೆ ಕುಳಿತೆ. ಅವನೂ ಉತ್ತರ ಅಪೇಕ್ಷಿಸದವನಂತೆ ಕಾಫಿ ಗುಟುಕರಿಸುತ್ತಾ.. ಕೋಣೆಯ ಸುತ್ತಾ ಗೋಡೆಯ ಮೇಲಿದ್ದ ವಿವಿಧ ಭಾವಚಿತ್ರಗಳನ್ನು ನೋಡಿದ.

ಕಾಫಿ ತುಂಬಾ ಚೆನ್ನಾಗಿದೇರ್ರಿ... ನೀವು ಕಾಫಿ ಕುಡಿಯಲ್ಲ ಅಂದ್ರಿ. ಇಷ್ಟು ಚೆನ್ನಾಗಿ ಹೇಗೆ ಕಾಫಿ ಮಾಡಿದ್ರಿ.

ಪ್ರಶ್ನೆ ಕೇಳುತ್ತಾನಷ್ಟೇ.. ಉತ್ತರ ಬೇಕಿಲ್ಲ.. ಉತ್ತರದ ನಿರೀಕ್ಷೆಯೂ ಮುಖದ ಮೇಲೆ ಇಲ್ಲ...

ನಿಮಗೆ ಇಷ್ಟು ದೊಡ್ಡ ಮಕ್ಕಳಿದಾರಾ?... ಅಥವಾ ನೀವು ನಿಮ್ಮ ಹಸ್ಬೆಂಡ್‌ಗೆ